


ಎಡದಿಂದ ಬಲಕ್ಕೆ:

1. ಮಾತೆಯ ಮನದ ತುಂಬ ಸದಾ ಇದೆಂಥ ಪ್ರೀತಿ? 3
3. ಹೊಲಕ್ಕೆ ಹೋದೊಡನೆ ಶುರುವಾಯಿತು ಜಗಳ 3
4. ವಿಪ್ಲವಗಳನ್ನೆಲ್ಲ ಗೆದ್ದು ಮತ್ತೆ ಹುಟ್ಟಿದ್ದು ಈ ಚಿಗುರು 3
6. ಅತಿರೇಕದ ವರ್ತನೆಯ ಫಲ ಈ ಕೀಳುದೆಸೆ 4
7. ಆತುರದಿಂದ ಅರಿಕೆ ಮಾಡಿದ್ದೇನೆಂಬುದು ಒಳಗಿನದೇ ವಿಷಯ 4
9. ಆತ ಹೀನ ದಂಧೆಗೆ ಇಳಿಯಲು ಕಾರಣ 'ಹಣದ ಬಾಯಾರಿಕೆ' 4
11. ನಾಡನ್ನು ಕಾಯಲು ಬಿಡುವಂತಿಲ್ಲ, ಇದು ಅಡವಿಯ ಶ್ವಾನ 4
15. ಪಾಣಿಗ್ರಹಣಕ್ಕೆ ಸಾಕ್ಷಿಯಾಗಲು ವಿನಾಯಕನೇ ಸಾಕು 3
16. ಒಳ್ಳೆಯದೆಂಬ ಕಾರಣಕ್ಕೆ ಇಷ್ಟೊಂದು ತಡವಾದರೆ ಹೇಗೆ? 3
17. ಪಿಟೀಲನ್ನು ಕಳುಹಿಸಲು ಅಂಚೆಯೇ ಸೂಕ್ತ ಹೌದೇ? 3

ಮೇಲಿಂದ ಕೆಳಕ್ಕೆ:

1. ಮತ ಹಾಕುವ ಕರ್ತವ್ಯಕ್ಕೆ ತುಂಬ ಪ್ರಾಮುಖ್ಯತೆ ಇದೆ 3
2. ತಾತ್ಪರ್ಯವನ್ನೂ ಅರ್ಥ ಮಾಡಿಕೊಳ್ಳಲಾರದ ಪೆದ್ದ 3
3. ಕ್ರೋಧವನ್ನು ಸಹಿಸದಿದ್ದರೆ ಯುದ್ಧವೇ ನಡೆದೀತು 3
5. ತಾವರೆಯೊಂದನ್ನು ತರಲೇಬೇಕೆಂದು ಭಾರೀ ಒತ್ತಾಯ 3
6. ಅಗೆದಗೆದು ತೆಗೆದ ಹಳ್ಳದ್ದು ವಿಪರೀತ ಆಳ 3
8. ಕಿಮ್ಮಿಯೇನೂ ಇಲ್ಲ ಬಿಡಿ, ಆತನ ಸಂಪಾದನೆ 3
10. ಗದರಿ ಕಳುಹಿವಿರೇಕೆ? ಆತನೊಬ್ಬ ಪಯಣಿಗ 3
12. ಬೇರೆಡೆಯಿಂದ ಬಂದ ನಿಸ್ಸಾರ ವಸ್ತು ತಲೆಕೆಳಗು 3
13. ಆತನ ಕಟ್ಟಪ್ಪಣೆಯ ಹಿಂದೆ ಭಾರೀ ಮೋಸ ಇದೆ 3
14. ಒಲ್ಲೆನೆನ್ನಲು ಸಾಧ್ಯವೇ ಇಲ್ಲ, ಇದು ಪ್ರಸಿದ್ಧ ನಾಟ್ಯಗಾರ ಹಕ್ಕಿ 3

---

23.09.2021 ಉತ್ತರಗಳು

ಎಡದಿಂದ ಬಲಕ್ಕೆ:

1. ಆಪದ್ಧನ 3. ಕಮಿಶ್ರ (=ಶ್ರಮಿಕ ಹಿಂದುಮುಂದು) 4. ಕ್ಷಣಿಕ 6. ಪರಿಣಯ 8. ಭವ್ಯಗೃಹ 10. ರತ್ನಾಕರ 12. ಸೆಕೆಗಾಲ 16. ಶಹರ 17. ರಕ್ಷಿತ 18. ತಡಸಲು (=ಜಲಪಾತ)

ಮೇಲಿಂದ ಕೆಳಕ್ಕೆ:

1. ಆಶ್ರಯ 2. ನಕ್ಷತ್ರ 3. ಕಠಿಣ 5. ಕರ್ತವ್ಯ 6. ಪರಾಶರ 7. ಯಶಸ್ಕರ 8. ಭರವಸೆ 9. ಹಳೇಕಾಲ 11. ಕರ್ಕಶ 13. ಕೆನೆತ 14. ಭರತ 15. ಬರಲು (=ಪೊರಕೆ)

ಪ್ರಶ್ನಾಂಕಣ

# ಧರೆಯ ಅತ್ಯಂತ ದೊಡ್ಡ ನದಿ ಯಾವುದು?

ಅದು ಅಮೆಜಾನ್ ನದಿ ಅಲ್ಲ; ನೈಲ್ ನದಿಯೂ ಅಲ್ಲ. ಅಷ್ಟೇ ಅಲ್ಲ, ಆ ನದಿ ಭೂ ನೆಲದ ಮೇಲಿಲ್ಲ; ನೆಲಾಂತರ್ಗತವಾಗಿಯೂ ಇಲ್ಲ! ವಾಸ್ತವವಾಗಿ ಧರೆಯ ಆ ಅತ್ಯಂತ ದೊಡ್ಡ ನದಿ ಆಕಾಶದಲ್ಲಿದೆ; ಭೂ ವಾಯುಮಂಡಲದಲ್ಲಿ ಅಗೋಚರವಾಗಿ ಪ್ರವಹಿಸುತ್ತಿದೆ!

ಇನ್ನೂ ವಿಸ್ಮಯ ಏನೆಂದರೆ, ದಕ್ಷಿಣ ಅಮೆರಿಕದಲ್ಲಿರುವ 'ಅಮೆಜೋನಿಯಾ ವೃಷ್ಟಿವನ'ದ ಮೂಲಕ ಪ್ರವಹಿಸುತ್ತಿರುವ ಭೂ ನೆಲದ ಅತ್ಯದ್ಭುತ, ಅದ್ವಿತೀಯ ನದಿ 'ಅಮೆಜಾನ್'ನ ಜೊತೆ ಜೊತೆಗೇ ಆ ಪ್ರದೇಶದಲ್ಲೇ ಈ ನದಿಯೂ ಆಕಾಶದಲ್ಲಿ ಪ್ರವಹಿಸುತ್ತಿದೆ! ಅಮೆಜೋನಿಯಾ ವೃಷ್ಟಿವನದಿಂದಲೇ ಜನ್ಮ ತಳೆದು, ಅಲ್ಲಿಂದಲೇ ನಿರಂತರ ಜಲ ಪೂರಣವನ್ನೂ ಪಡೆದು ಅದೇ ವೃಷ್ಟಿವನವನ್ನೇ ಪೋಷಿಸುತ್ತಿದೆ. ವ್ಯತ್ಯಾಸ ಏನೆಂದರೆ ಈ ನದಿಯ ಜಲ ರಾಶಿ ಆವಿ ರೂಪದಲ್ಲಿದೆ. ಅದೇ ಆವಿಯ ಕಣಗಳು ನೀರ ಹನಿಗಳಾಗಿ ವರ್ಷವಿಡೀ ನಿತ್ಯವೂ ಮಳೆಯಾಗಿ ಸುರಿಯುತ್ತಿವೆ. ಇದೇ ಮಳೆಯ ಸಮೃದ್ಧ ನೀರೇ ಏಳೂವರೆ ದಶಲಕ್ಷ ಚದರ ಕಿಲೋ ಮೀಟರ್ ವೈಶಾಲ್ಯದ ಅಮೆಜೋನಿಯಾ ಮಳೆಕಾಡನ್ನು ಪೋಷಿಸುತ್ತ ಅಮೆಜಾನ್ ನದಿಯಲ್ಲೂ ತುಂಬಿ ಹರಿಯುತ್ತಿದೆ (ಚಿತ್ರಗಳಲ್ಲಿ ಗಮನಿಸಿ).

ಅದ್ಭುತ ಏನೆಂದರೆ, ನೀರಿನ ಪ್ರಮಾಣದಲ್ಲಿ ಆಕಾಶದ ಈ ಅಗೋಚರ ಆವಿರೂಪದ ನದಿ ಅಮೆಜಾನ್ ನದಿಯನ್ನೂ ಮೀರಿಸಿದೆ! ಅಮೆಜಾನ್ ನದಿಯ ಪ್ರತಿದಿನದ ನೀರಿನ ಹರಿವು ಹದಿನೇಳು ಶತಕೋಟಿ ಟನ್ (ಎಂದರೆ, ಹದಿನೇಳು ಸಾವಿರ ಶತಕೋಟಿ ಲೀಟರ್). ಅದೇ ಅಮೆಜೋನಿಯಾದ ಆಕಾಶದ ನದಿಯನ್ನು ಪ್ರತಿದಿನ ಸೇರುತ್ತಿರುವ ನೀರು ಇಪ್ಪತ್ತು ಸಾವಿರ ಶತಕೋಟಿ ಲೀಟರ್!

ವಾಯುಮಂಡಲದಲ್ಲಿ ಪ್ರವಹಿಸುತ್ತಿರುವ ಈ ನದಿಗೆ ಅಷ್ಟೊಂದು ನೀರು ನಿತ್ಯವೂ ಪೂರಣಗೊಳ್ಳುತ್ತಿರುವುದು ಹೇಗೆ?

ಅಮೆಜೋನಿಯಾ ವೃಷ್ಟಿವನದ ವೃಕ್ಷರಾಶಿಯೇ ಈ ನದಿಯ ಜಲ ಮೂಲ. ಧರೆಯ ಅತ್ಯಂತ ವಿಸ್ತಾರ ವೃಷ್ಟಿವನವಾದ ಅಮೆಜೋನಿಯಾದಲ್ಲಿ ನೂರಾರು ಶತಕೋಟಿ ವೃಕ್ಷಗಳಿವೆ. ಅಲ್ಲಿನ ಪ್ರತಿಯೊಂದು ಮಹಾ ವೃಕ್ಷವೂ ಪ್ರತಿ ನಿತ್ಯ ಸರಾಸರಿ ಒಂದು ಸಾವಿರ ಲೀಟರ್ ನೀರನ್ನು 'ದ್ಯುತಿ ಸಂಶ್ಲೇಷಣಾ




ಕ್ರಿಯೆ'ಯ ಮೂಲಕ ಆವಿ ರೂಪದಲ್ಲಿ ಬಿಡುಗಡೆ ಮಾಡುತ್ತಿದೆ. ಅವೆಲ್ಲ ನೀರಾವಿ ಕಣಗಳೂ ಮುಗಿಲಿಗೇರುತ್ತವೆ; ಗಾಳಿ ಪ್ರವಾಹಗಳೊಡನೆ ತೇಲುತ್ತ ಗುಂಪುಗೂಡಿ ಮೋಡವಾಗುತ್ತವೆ. ವೃಷ್ಟಿವನದ ಆಗಸದಲ್ಲಿ ಅಪಾರ ಸಂಖ್ಯೆಯಲ್ಲಿ ತೇಲಾಡುತ್ತಿರುವ ಪರಾಗ ಮತ್ತು ಬೀಜ ಕಣಗಳ ಸುತ್ತ ಗುಂಪುಗೂಡಿ ನೀರ ಹನಿಗಳಾಗುತ್ತವೆ; ಮಳೆಯಾಗಿ ಸುರಿಯುತ್ತವೆ. ಅದೇ ಚಕ್ರ ನಿರಂತರ ಮುಂದುವರೆಯುತ್ತಿದೆ. ಎಷ್ಟು ವಿಭಿನ್ನ, ಎಂಥ ಅದ್ಭುತ ನದಿ! ಅಲ್ಲವೇ? ಆಫ್ರಿಕಾ ಖಂಡದ 'ಕಾಂಗೋ' ಪ್ರದೇಶದಲ್ಲಿ ಮತ್ತು ಆಗ್ನೇಯ ಏಷಿಯದಲ್ಲೂ ಇರುವ ವಿಶಾಲ ವೃಷ್ಟಿವನಗಳ ಆಗಸದಲ್ಲೂ ಇಂತಹ 'ಆಕಾಶ ನದಿ'ಗಳು ಪ್ರವಹಿಸುತ್ತಿವೆ!

ಎನ್. ವಾಸುದೇವ್